SRI K. M. KRISHNA REDDY.(Minister for Sericulture, Animal Husbandry and Fisheries,—

a) The quantity of silk produced in the State during the last three years is given below.

year	Qty, of silk Produced (in M. Tons)
1983–84	3928
1984–85	4059
198 –86	4300

b) The quantum of silk imported to Karnataka is not available

c) yes. They will get a good price. To protect the Sericulturists, the Government of Karnataka has urged the Government of India to completely stop the import of silk.

ಹಿಂದಿನ ಗ್ರಾಮ ಪಂಚಾಯಿತಿಗಳ ಬಾಕಿ ಹಣವನ್ನು ಸರ್ಕಾರದವರೇ ತುಂಬುವ ಬಗ್ಗೆ

೧೯೭೬. ಶ್ರೀ ಬಸವರಾಜ್ ಪಾಟೀಲ್ (ಹುಮನಾಬಾದ್).—ಮಾನ್ಯ ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅನೇಕ ಗ್ರಾಮ ಪಂಚಾಯಿತಿಗಳು ಇರುವ ಕೆಲವೊಂದು ಕಡೆ ಹಿಂದಿನ ವಿದ್ಯುತ್ ಬಾಕಿ ಹಣ ಪಾವತಿ ಮಾಡದೇ ಇದ್ದುದರಿಂದ ವಿದ್ಯುತ್ ಮಂಡಳಿಯವರು ಹೊಸದಾಗಿ ವಿದ್ಯುದ್ದೀಕರಣ ಮಾಡುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಅಂತಹ ಗ್ರಾಮ ಪಂಚಾಯಿತಿಗಳ ಬಾಕಿ ಹಣವನ್ನು ಸರ್ಕಾರವೇ ಪಾವತಿ ಮಾಡಿ ಹೊಸದಾಗಿ ವಿದ್ಯುದ್ದೀಕರಣ ಮಾಡಲು ಯೋಜನೆ ಹಾಕಿ ಕೊಳ್ಳಲಾಗಿರುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಮತ್ತು (ಆ) ರಾಜ್ಯ ಸರ್ಕಾರದವರು ಗ್ರಾಮ ಪಂಚಾಯಿತಿಗಳ ಬೀದಿ ದೀಪದ ವಿದ್ಯುತ್ ಬಳಕೆ ಮತ್ತು ಹಣವನ್ನು ಪಾವತಿ ಮಾಡಲು ಒಪ್ಪಿರುವುದರಿಂದ ವಿದ್ಯುತ್ ಮಂಡಳಿಯವರು ಹೆಚ್ಚುವರಿ ವಿದ್ಯುತ್ ದೀಪಗಳನ್ನು ಒದಗಿಸುವ ಬಗ್ಗೆ ಈಗಾಗಲೇ ಸೂಕ್ತ ಆದೇಶಗಳನ್ನು ಅಧಿಕಾರಿಗಳಿಗೆ ನೀಡಿದ್ದಾರೆ. ಆದರಂತೆ ಅಸಿಸ್ಟೆಂಟ್ ಕಮೀಷನರ್‌ರವರ ಕೋರಿಕೆಯ ಮೇಲೆ ನಿಯಮಾನುಸಾರ ಅವಶ್ಯಕತೆ ಇದ್ದಲ್ಲಿ ಹೆಚ್ಚುವರಿ ಬೀದಿ ದೀಪಗಳನ್ನು ಒದಗಿಸಲಾಗುತ್ತಿದೆ.

ಕರ್ನಾಟಕದಲ್ಲಿ ಎಗ್-ಬೋರ್ಡ್ ಮಾಡುವ ವಿಷಯದ ಬಗ್ಗೆ

೧೨೮೦ (ಡಿ) ಶ್ರೀ ಹೆಚ್.ಜಿ. ಚನ್ನಪ್ಪ.(ಮಾಗಡಿ).—ಮಾನ್ಯ ರೇಷ್ಮೆ, ಪಶು ಸಂಗೋಪನಾ ಮಂತ್ರಿ, ಮಂತ್ರಿಮಂಡಲದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕೋಳಿ ಸಾಕಾಣಿಕೆದಾರರ ಅನುಕೂಲಕ್ಕಾಗಿ ಒಂದು ಎಗ್ ಬೋರ್ಡ್ ಮಾಡ ಬೇಕೆಂಬ ವಿಷಯ ಸರ್ಕಾರದ ಯೋಜನೆಯಲ್ಲಿದ್ದುದು ನಿಜವೇ ?

ಆ) ಆಂಧ್ರ, ಗುಜರಾತ್, ಮಹಾರಾಷ್ಟ್ರದಲ್ಲಿರುವಂತೆ ಫೀಡ್ ಆರ್ಡರನ್ನು ರಾಜ್ಯದಲ್ಲೂ ಜಾರಿಗೆ ತರಬೇಕೆಂಬ ಬೇಡಿಕೆ ಇದ್ದುದು, ಅದು ಈಗ ಯಾವ ಹಂತದಲ್ಲಿದೆ ?